ಶಾಖೆ / ವಿಷಯ : DEPARTMENT / SUBJECT: ಗೃಹ - ೧ ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ

ದಿನಾಂಕ : DATE: 27/3/21

# ದೂರಿನ ಬೆನ್ನಲ್ಲೇ ಬಂತು ಆಡಿಯೊ

**ಲಿಖಿತ ದೂರು ನೀಡಿದ ಸಿಡಿ ಲೇಡಿ । ತನ್ನ ಕುಟುಂಬದ ಜತೆ ಮಾತಾಡಿದ್ದಾಳೆ ಎಂದು ಹೇಳಲಾದ ಆಡಿಯೊ ತುಣುಕು ವೈರಲ್ । ಆಡಿಯೊದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೆಸರು ಪ್ರಸ್ತಾಪ । ಸರಕಾರ ಬೀಳಿಸಿದವನು ಇದಕ್ಕೆಲ್ಲ ಹೆದರುವುದಿಲ್ಲ ಎಂದ ರಮೇಶ್ ಜಾರಕಿಹೊಳಿ । ಇಂದು ಸಂಜೆ 4 ಗಂಟೆಗೆ ದೊಡ್ಡ ಸುದ್ದಿ ಸ್ಫೋಟ ಮಾಡುವೆ**

## ರಮೇಶ್ ವಿರುದ್ಧ ಎಫ್‌ಐಆರ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು 27/3/21

ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿರುವ ಸಿಡಿ ಪ್ರಕರಣಕ್ಕೆ ಮಹತ್ತರ ತಿರುವು ಸಿಕ್ಕಿದ್ದು, ಸಿಡಿ ಲೇಡಿ ಲಿಖಿತ ದೂರು ಆಧರಿಸಿ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಬೆಂಗಳೂರಿನ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಶುಕ್ರವಾರ ಬೆಳಗ್ಗೆ ಯುವತಿ ಆಡಿಯೋ ಬಿಡುಗಡೆ ಮೂಲಕ ದೂರು ನೀಡುವ ಕುರಿತು ಮಾಹಿತಿ ಹಂಚಿಕೊಂಡಿದ್ದರು. ಈ ಬೆನ್ನಲ್ಲೇ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಯುವತಿ ಪರ ವಕೀಲ ಜಗದೀಶ್, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

→ 4

### ದೂರಿನಲ್ಲಿ ಏನಿದೆ?

**ಸರಕಾರಿ ಕೆಲಸ ಕೊಡಿಸುವುದಾಗಿ ಲೈಂಗಿಕ ಸಂಪರ್ಕ ಬೆಳೆಸಿ ಕೆಲಸ ಕೊಡಿಸದೆ ವಂಚಿಸಿ ಜೀವ ಬೆದರಿಕೆ ಹಾಕಲಾಗಿದೆ. ವಿಡಿಯೊ ಕರೆ ಮಾಡಿ ಅಶ್ಲೀಲ ಮಾತುಗಳನ್ನಾಡಿದ್ದಾರೆ. ಅವರು ಪ್ರಭಾವಿ ಆಗಿದ್ದರಿಂದ ಹೇಳಿದಂತೆ ಕೇಳಿದ್ದೇನೆ. ಅವರ ಅಪಾರ್ಟ್‌ಮೆಂಟ್‌ನಲ್ಲೇ 2 ಬಾರಿ ಲೈಂಗಿಕ ಕ್ರಿಯೆ ನಡೆದಿದೆ. ನಂತರ ಕೆಲಸ ಕೊಡಿಸುವುದಿಲ್ಲ ಎಂದು ಹೇಳಿ ಮೋಸ ಮಾಡಿದ್ದಾರೆ. ಜತೆಗೆ, ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಉಲ್ಲೇಖಿಸಲಾಗಿದೆ**

### ಯಾವ್ಯಾವ ಸೆಕ್ಷನ್‌ಗಳು ದಾಖಲು

**376**ಸಿ-ಪ್ರಭಾವಿ ಹುದ್ದೆಯಲ್ಲಿದ್ದು ಲೈಂಗಿಕ ದೌರ್ಜನ್ಯ ಕೃತ್ಯ
**354**ಎ-ಲೈಂಗಿಕ ದೌರ್ಜನ್ಯ ಶಿಕ್ಷೆ ಪ್ರಮಾಣ
**504**-ಶಾಂತಿ ಕದಡಲು ಉದ್ದೇಶ ಪೂರ್ವಕ ಅಪಮಾನ
**506**-ಜೀವ ಬೆದರಿಕೆ, **417**-ವಂಚನೆಗೆ ಶಿಕ್ಷೆ
**67**ಎ- ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ದೃಶ್ಯ ಪ್ರಸಾರ



ಯುವತಿ ಲಿಖಿತ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಾಗಿದೆ. ಯುವತಿಗೆ ಮತ್ತು ಕುಟುಂಬಕ್ಕೆ ರಕ್ಷಣೆ ನೀಡುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಮಾಡಲಾಗಿದೆ. ಡಿಜಿ ಮತ್ತು ಐಜಿಪಿ ಅನುಮತಿ ಕೊಟ್ಟರೆ ಯುವತಿ ಬಂದು ಹೇಳಿಕೆ ಕೊಡುತ್ತಾರೆ.

– **ಜಗದೀಶ್** ಯುವತಿ ಪರ ವಕೀಲರು

## ಡೋಂಟ್‌ಕೇರ್: ಜಾರಕಿಹೊಳಿ

ನಾಳೆಯಿಂದ ನಮ್ಮ ಆಟ ಶುರುವಾಗುತ್ತದೆ. ಇನ್ನೂ 10 ಸಿಡಿಗಳು ಬಂದರೂ ಎದುರಿಸಲು ಸಿದ್ಧರಿದ್ದೇವೆ. ಮಹಾನಾಯಕ ಯಾರೆಂದು ಗೊತ್ತಾಗಲಿದೆ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಎಂದು ಹೇಳಿದ್ದಾರೆ. ಸಿಡಿ ಲೇಡಿ ನೀಡಿದ ಲಿಖಿತ ದೂರಿಗೆ ಪ್ರತಿಕ್ರಿಯಿಸಿದ ರಮೇಶ್ ಜಾರಕಿಹೊಳಿ ಅವರು, ಪ್ರಕರಣದ ಕೊನೆಯ ಅಸ್ತ್ರವನ್ನು ಬಿಟ್ಟಿದ್ದಾರೆ. ನಾನು ಯಾವುದಕ್ಕೂ ಅಂಜುವ ವ್ಯಕ್ತಿಯಲ್ಲ. ನಾನು ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿರುವೆ. ಅಂತಹ ಸರಕಾರವನ್ನೇ ತೆಗೆದಿದ್ದೇನೆ, ಇದ್ಯಾವ ಲೆಕ್ಕ ಎಂದು ಹೇಳಿದ್ದಾರೆ.

**ಡಿ.ಕೆ.ಶಿವಕುಮಾರ್ ನನ್ನ ಹಳೆಯ ಗೆಳೆಯ, ಅವರಿಗೆ ಒಳ್ಳೆಯದಾಗಬೇಕು. ನನ್ನ ಕಷ್ಟ ಸುಖದಲ್ಲಿ ಕೂಡಿ ಬಂದವ. ಆಡಿಯೊದಲ್ಲಿ ಹೆಸರಿದೆ ಅಂತಾ ಆರೋಪಿ ಅಲ್ಲ. ಕಷ್ಟ ಸುಖದಲ್ಲಿ ಡಿಕೆಶಿ ನಾನು ಕೂಡಿ ಬಾಳಿದ್ದೇವೆ. ಹೀಗಾಗಿ, ನನ್ನ ರೀತಿಯಲ್ಲಿ ಅವರು ರಾಜೀನಾಮೆ ಕೊಡಬಾರದು.**

– **ರಮೇಶ್ ಜಾರಕಿಹೊಳಿ** ಮಾಜಿ ಸಚಿವ

ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಪ್ರಕರಣ ಸಂಬಂಧ ನಾನು ಮೊದಲು ದೂರು ನೀಡಿದ್ದೇನೆ. ನನ್ನ ದೂರಿನ ಬಗ್ಗೆ ಏನಾಗಿದೆ ಎಂದು ಕೇಳುತ್ತೇನೆ. ಪೊಲೀಸ್ ಆಯುಕ್ತ ಕಮಲ್ ಪಂತ್‌ನನ್ನು ಕೇಳುತ್ತೇನೆ. ಮೊದಲು ನನ್ನ ಎಫ್‌ಐಆರ್ ಬಗ್ಗೆ ತನಿಖೆಯಾಗಬೇಕು. ನನ್ನ ವಿರುದ್ಧದ ಷಡ್ಯಂತ್ರದ ಬಗ್ಗೆ ಗೃಹ ಸಚಿವರಿಗೆ ಹೇಳಿದ್ದೇನೆ ಎಂದು ತಿಳಿಸಿದ್ದಾರೆ.

ಯುವತಿ ಮಾತನಾಡಿದ್ದು ಎಂದು ಹೇಳಲಾದ ಆಡಿಯೊ ವೈರಲ್ ಆದ ಬೆನ್ನಲ್ಲೇ ರಮೇಶ್ ಜಾರಕಿಹೊಳಿ ಸುದ್ದಿಗಾರರೊಂದಿಗೆ ಮಾತನಾಡಿ, ಡಿ.ಕೆ.ಶಿವಕುಮಾರ್ ನನ್ನ ಹಳೆಯ ಗೆಳೆಯ, ಡಿ.ಕೆ.ಶಿವಕುಮಾರ್‌ಗೆ ಒಳ್ಳೆಯದಾಗಬೇಕು. ನನ್ನ ಕಷ್ಟ ಸುಖದಲ್ಲಿ ಕೂಡಿ ಬಂದವ ಡಿ.ಕೆ.ಶಿವಕುಮಾರ್. ಆಡಿಯೊದಲ್ಲಿ ಹೆಸರಿದೆ ಅಂತಾ ಡಿಕೆಶಿ ಆರೋಪಿ ಅಲ್ಲ, ಕಷ್ಟ ಸುಖದಲ್ಲಿ ಡಿಕೆಶಿ ನಾನು ಕೂಡಿ ಬಾಳಿದ್ದೇವೆ. ಹೀಗಾಗಿ, ನನ್ನ ರೀತಿಯಲ್ಲಿ ಡಿಕೆಶಿ ರಾಜೀನಾಮೆ ಕೊಡಬಾರದು. ನಾನು ಯಾರಿಗೂ ಕೆಟ್ಟದನ್ನು ಬಯಸುವ ವ್ಯಕ್ತಿ ಅಲ್ಲ ಎಂದು ರಮೇಶ್ ಜಾರಕಿಹೊಳಿ ಹೇಳಿದರು.

## ಆಡಿಯೊದಲ್ಲಿ ಡಿಕೆಶಿ ಹೆಸರು



ರಮೇಶ್ ಜಾರಕಿಹೊಳಿ ಸಿಡಿ ಪ್ರಕರಣಕ್ಕೆ ಸಂಬಂಧಿಸಿ ಸ್ಫೋಟಕ ತಿರುವು ದೊರೆತಿದೆ. ಆ ಸಿಡಿಗೆ ಸಂಬಂಧಿಸಿದ ಯುವತಿ ತನ್ನ ಕುಟುಂಬ ಸದಸ್ಯರ ಜತೆ ಮಾತಾಡಿದ್ದಾಳೆ ಎಂದು ಹೇಳಲಾದ ಆಡಿಯೊ ತುಣುಕು ವೈರಲ್ ಆಗಿದೆ. ಗೆಳೆಯ ಆಕಾಶ್ ಜತೆಗಿದ್ದ ವೇಳೆ ಅವಳು ತನ್ನ ತಮ್ಮನ ಜತೆ ಮಾತನಾಡಿದ್ದಾಳೆ ಎನ್ನುವ 6 ನಿಮಿಷ 59 ಸೆಕೆಂಡ್‌ಗಳ ಆಡಿಯೊ ಹೊರಬಿದ್ದಿದೆ. 'ನಾನು ನಂಬುವ ಕೃಷ್ಣನ ಮೇಲಾಣೆ ವೈರಲ್ ಆದ ಸಿಡಿ ವಿಡಿಯೊದಲ್ಲಿ ಇರುವುದು ನಾನಲ್ಲ, ನನ್ನ ನಂಬು' ಎಂದು ಆಡಿಯೋ ತುಣುಕಿನಲ್ಲಿ ತನ್ನ ತಮ್ಮನ ಬಳಿ ಯುವತಿ ಮನವಿ ಮಾಡಿದ್ದಾಳೆ. ಅಲ್ಲದೇ ಇವೆಲ್ಲವೂ ನಿನಗೆ ಬೇಕಾ? ಎಂದು ಯುವತಿಯ ತಮ್ಮ ಅವಳನ್ನು ಪ್ರಶ್ನಿಸಿದ್ದಾನೆ. ಅದಕ್ಕೆ ಉತ್ತರಿಸುವ ಯುವತಿ, ಖುದ್ದು ಡಿಕೆಶಿ ಅವರೇ ಬರುತ್ತಿದ್ದಾರೆ ಎಂದು ಆಡಿಯೊ ತುಣುಕಿನಲ್ಲಿ ಹೇಳಿದ್ದಾಳೆ. ಈ ಆಡಿಯೊ ತುಣುಕು ಇದೀಗ ವೈರಲ್ ಆಗುತ್ತಿದೆ.

## ಎಸ್‌ಐಟಿ ಮುಂದಿರುವ ಆಯ್ಕೆಗಳೇನು?

- ರಮೇಶ್ ಜಾರಕಿಹೊಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸುವುದು.
- ಕೋರ್ಟ್‌ನಿಂದ ಸರ್ಚ್ ವಾರಂಟ್ ಪಡೆದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಮನೆ ಮೇಲೆ ದಾಳಿ ಮಾಡುವುದು.
- ಯುವತಿ ಹೇಳಿಕೆ ಪಡೆದು, ಆಕೆಯ ಸಾಕ್ಷಿಗಳನ್ನು ವಿಚಾರಣೆ ನಡೆಸುವುದು.
- ಯುವತಿಯ ಪಾತ್ರ ಮತ್ತು ಇತರ ಆರೋಪಿಗಳ ಪಾತ್ರದ ಬಗ್ಗೆ ತನಿಖೆ ನಡೆಸುವುದು.
- ಅಗತ್ಯ ಸಾಕ್ಷಿಗಳು ಸಿಕ್ಕ ನಂತರ ಬಂಧನ ಮಾಡುವುದು.
- ಸೂಕ್ತ ಸಾಕ್ಷ್ಯಾಧಾರಗಳು ದೊರೆತರೆ ಆರೋಪಿಗಳನ್ನು ಬಂಧಿಸುವುದು.
- ಸಿಡಿ ಪ್ರಕರಣದ ತನಿಖೆ ಮುಗಿದ ಬಳಿಕ ಅಂತಿಮ ವರದಿ ನೀಡಿ ಕೋರ್ಟ್‌ಗೆ ಚಾರ್ಜ್‌ಶೀಟ್ ಸಲ್ಲಿಕೆ

ಸಿಡಿ ಪ್ರಕರಣದಲ್ಲಿ ದಿನಕ್ಕೊಂದು ತಿರುವು ಪಡೆಯುತ್ತಿರಬಹುದು. ಆದರೆ ಎಸ್‌ಐಟಿ ತನ್ನ ಕೆಲಸವನ್ನು ಮಾಡುತ್ತಿದೆ. ಈ ತಿರುವು, ಟ್ವಿಸ್ಟ್‌ಗಳಿಂದ ಎಸ್‌ಐಟಿ ವಿಚಲಿತವಾಗುವುದಿಲ್ಲ.

– **ಬಸವರಾಜ ಬೊಮ್ಮಾಯಿ** ಗೃಹಸಚಿವ

4

# ದೂರಿನ ಬೆನ್ನಲ್ಲೇ ಬಂತು ಆಡಿಯೊ

3SE 27/3/21

← ಮೊದಲಪುಟದಿಂದ

ಮಧ್ಯಾಹ್ನ 2.30 ಕ್ಕೆ ನಗರ ಪೊಲೀಸ್ ಆಯುಕ್ತರ ಕಚೇರಿಗೆ ಆಗಮಿಸಿದ ಯುವತಿ ಪರ ವಕೀಲ ಜಗದೀಶ್ ಮತ್ತು ವಕೀಲರ ತಂಡ ಕಮಲ್ ಪಂತ್ ಅವರನ್ನು ಭೇಟಿಯಾಗಿ ದೂರು ನೀಡಿದ್ದರು. ಆ ನಂತರ ಅವರಿಗೆ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸುವಂತೆ ಆಯುಕ್ತರು ಸೂಚಿಸಿದರು. ಹೀಗಾಗಿ ತಂಡ ನೇರ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಗೆ ಭೇಟಿ ನೀಡಿ, ದೂರನ್ನು ಸಲ್ಲಿಸಿದರು. ಕಬ್ಬನ್‌ಪಾರ್ಕ್ ಠಾಣೆ ಇನ್ಸ್‌ಪೆಕ್ಟರ್ ಬಿ. ಮಾರುತಿ ಪರಿಶೀಲನೆ ನಡೆಸಿದ ಬಳಿಕ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಎಫ್‌ಐಆರ್ ದಾಖಲಸಿಕೊಂಡಿದ್ದಾರೆ. ನಂತರ ವಕೀಲರ ತಂಡ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಅವರನ್ನು ಭೇಟಿಯಾಗಿ ಯುವತಿಗೆ ಮತ್ತು ಆಕೆಯ ಕುಟುಂಬಕ್ಕೆ ಸೂಕ್ತ ರಕ್ಷಣೆ ಒದಗಿಸುವಂತೆ ಮನವಿ ಮಾಡಿದ್ದಾರೆ.

**ಮೂರನೇ ವಿಡಿಯೊ ಬಿಡುಗಡೆ:** ಶುಕ್ರವಾರ ಬೆಳಗ್ಗೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಸಿಡಿಯಲ್ಲಿರುವ ಯುವತಿ ಮೂರನೇ ವಿಡಿಯೊ ಬಿಡುಗಡೆ ಮಾಡಿ ಕಳೆದ 24 ದಿನಗಳಿಂದ ನಾನು ಜೀವ ಭಯದಲ್ಲಿ ಇದ್ದೆ. ಎಲ್ಲರ ಬೆಂಬಲದಿಂದಾಗಿ ಇವತ್ತು ನನಗೆ ಧೈರ್ಯ ಬಂದಿದೆ. ಹೀಗಾಗಿ ನನ್ನ ವಕೀಲರಾದ ಜಗದೀಶ್ ಮೂಲಕ ರಮೇಶ್ ಜಾರಕಿಹೊಳಿ ವಿರುದ್ಧ ದೂರನ್ನು ಸಲ್ಲಿಸುತ್ತಿದ್ದೇನೆ ಎಂದು ಅಜ್ಞಾನ ಸ್ಥಳದಿಂದ ಬಿಡುಗಡೆ ಮಾಡಲಾದ ವಿಡಿಯೊದಲ್ಲಿ ಹೇಳಿದ್ದಾಳೆ.

**ಎಸ್‌ಐಟಿ ಮುಂದಿನ ನಡೆ ಏನು?:** ಸದ್ಯಕ್ಕೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರನ್ನು ಬಂಧಿಸುವ ಸಾಧ್ಯತೆ ಕಡಿಮೆಯಾಗಿದೆ. ಏಕೆಂದರೆ ಈ ರೀತಿ ಪ್ರಕರಣದಲ್ಲಿ ಮೊದಲು ಸಂತ್ರಸ್ತ ಯುವತಿ ಹೇಳಿಕೆ ನಂತರ ವೈದ್ಯಕೀಯ ಪರೀಕ್ಷೆ ಅಗತ್ಯ. ಸಂತ್ರಸ್ತ ಮಹಿಳೆ ವೈದ್ಯಕೀಯ ಪರೀಕ್ಷೆ ಆಗಬೇಕು. ಆನಂತರ ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆ ಬಹುಮುಖ್ಯವಾಗಿರುತ್ತದೆ. ಸಿಆರ್‌ಪಿಸಿ 164 ಪ್ರಕಾರ ಸಂತ್ರಸ್ತೆ ಹೇಳಿಕೆ ದಾಖಲಿಸಬೇಕು. ಮೊದಲು ಠಾಣೆಯಿಂದ ಎಸ್‌ಐಟಿಗೆ ಪ್ರಕರಣ ವರ್ಗಾವಣೆಯಾಗುತ್ತದೆ. ಬೆಂಗಳೂರಿನಲ್ಲಿ ಸದ್ಯಕ್ಕೆ ಮೂವರು ಮಹಿಳಾ ಎಸಿಪಿಗಳು ಇದ್ದು, ಎಸಿಪಿ ಶ್ರೇಣಿ ಮಹಿಳಾ ಅಧಿಕಾರಿ ಈ ತನಿಖೆಗೆ ನೇಮಕವಾಗಬೇಕು. ಸಂತ್ರಸ್ತೆಗೆ ನೋಟಿಸ್ ನೀಡಿ ಎಸಿಪಿ ತನಿಖೆ ಆರಂಭಿಸಲಿದ್ದಾರೆ. ಮೂರು ದಿನ ಅಂತರದಲ್ಲಿ 3 ಬಾರಿ ನೋಟಿಸ್ ನೀಡಿ ಕೇಸ್ ಪ್ರಗತಿ ಬಗ್ಗೆ ನಿರಂತರ ಕೋರ್ಟ್‌ಗೆ ಮಾಹಿತಿ ನೀಡಲಿದ್ದಾರೆ. ಎಸ್‌ಐಟಿ ಅಧಿಕಾರಿಗಳು ಕೇಸ್ ಡೈರಿ ಫೈಲ್ ಮಾಡಲಿದ್ದಾರೆ.

## ಸಿಎಂ ಭೇಟಿಯಾದ ಬಾಲಚಂದ್ರ

**ಸಿಡಿ ಪ್ರಕರಣದಲ್ಲಿ ಹಲವು ಬೆಳವಣಿಗೆಗಳು ನಡೆದ ಬೆನ್ನಲ್ಲೇ ರಮೇಶ್ ಜಾರಕಿಹೊಳಿ ಸಹೋದರ ಬಾಲಚಂದ್ರ ಜಾರಕಿಹೊಳಿ ಅವರು ಶುಕ್ರವಾರ ರಾತ್ರಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಭೇಟಿಯ ವೇಳೆ, ಪ್ರಸಕ್ತ ಬೆಳವಣಿಗೆ ಬಗ್ಗೆ ಮಾತನಾಡಿದ್ದಾರೆ ಎಂದು ತಿಳಿದುಬಂದಿದೆ. ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಾಲಚಂದ್ರ ಜಾರಕಿಹೊಳಿ ಅವರು, 'ಈಗ ಬಿಡುಗಡೆಯಾಗಿರುವ ಆಡಿಯೊದಿಂದ ತನಿಖೆ ತಾರ್ತಿಕ ಅಂತ್ಯದತ್ತ ಹೋಗುತ್ತಿದೆ. ಆಡಿಯೊದಲ್ಲಿರುವ ಧ್ವನಿ ಯುವತಿಯದ್ದು ಎಂದು ಖಚಿತವಾದರೆ, ತನಿಖೆಗೆ ಒಂದು ಅಂತ್ಯ ಕಾಣಲಿದೆ' ಎಂದು ಹೇಳಿದರು.**

**ಸಂಜೆ 4ಕ್ಕೆ ದೊಡ್ಡ ಸುದ್ದಿ ಸ್ಫೋಟ:** ಎಫ್‌ಐಆರ್ ದಾಖಲಾಯಿತು ಎಂದ ಮಾತ್ರಕ್ಕೆ ನಾನು ಆರೋಪಿ ಅಲ್ಲ. ಮೊದಲು ನಾನು ದಾಖಲಿಸಿದ ಎಫ್‌ಐಆರ್ ಬಗ್ಗೆ ತನಿಖೆ ಆಗಲಿ. ನನಗೆ ಜಾಮೀನು ಪಡೆಯುವ ಅವಶ್ಯಕತೆ ಇಲ್ಲ. ನಾನು ಯಾರಿಗೂ ಕೆಟ್ಟದ್ದನ್ನು ಬಯಸುವ ವ್ಯಕ್ತಿ ಅಲ್ಲ. ನಾನು ನಿರಪರಾಧಿಯಾಗಿ ಹೊರಗಡೆ ಬರುತ್ತೇನೆ. ನಾನು ಜಾಮೀನು ತೆಗೆದುಕೊಳ್ಳುವ ತಪ್ಪು ಮಾಡಿಲ್ಲ. ನಾಳೆ ಇದಕ್ಕಿಂತ ಸ್ಫೋಟಕ ಮಾಹಿತಿ ಇದೆ. ನಾಳೆ ಸಂಜೆ 4ರಿಂದ 6 ಗಂಟೆಗೆ ದೊಡ್ಡ ಸುದ್ದಿ ಸ್ಫೋಟ ಮಾಡುತ್ತೇನೆ. ಅಲ್ಲಿಯವರೆಗೆ ವಕೀಲರು ಏನನ್ನೂ ಮಾತಾಡದಂತೆ ಹೇಳಿದ್ದಾರೆ. ನಾನು ಈಗ ಆ ಆಡಿಯೊವನ್ನು ಟಿವಿ ನಲ್ಲಿ ಕೇಳಿದೆ. ಆ ಹೆಣ್ಣು ಮಗು ಕೂಡ ಗ್ರಾಫಿಕ್ಸ್ ಎಂದು ಹೇಳಿದ್ದಾರೆ. ನಂದಲ್ಲ ಅಂತಾ ಹೇಳಿದ್ದಾರೆ,ನಾನು ಯಾರ ಹೆಸರನ್ನೂ ತೆಗೆದುಕೊಂಡಿಲ್ಲ. ನಾಳೆ ಸಂಜೆ 4ರಿಂದ 6 ಗಂಟೆಗೆ ದೊಡ್ಡ ಸುದ್ದಿ ಸ್ಫೋಟ ಮಾಡುತ್ತೇನೆ ಎಂದು ಅವರು ಹೇಳಿದರು.